ಸುನೀಲ್ ದತ್, ರಾಜೇಂದ್ರಕುಮಾರ್ ಶೂಟಿಂಗಿಗೆ ಬರುತ್ತಿದ್ದರು. ರಾಜಕುಮಾರ್ ನಮ್ಮ ಮನೆಗೆ ಚಹಾ ಕುಡಿಯಲು ಬರುತ್ತಿದ್ದರು. ನಾನು ಫೋಟೊಗ್ರಾಫರ್ ಆಗಿ ಶೂಟಿಂಗ್ ಜಾಗಗಳಿಗೆ ಹೋಗುತ್ತಿದ್ದೆ. ಸುನೀಲ್ ದತ್ ಒಮ್ಮೆ ಪಂಜಾಬಿಯಲ್ಲಿ ಹೇಳಿದರು: 'ಬಾಜಿ, ನಿನ್ನನ್ನು ಬಾಲಿವುಡ್‌ಗೆ ಕರೆದೊಯ್ಯುತ್ತೇನೆ'. ನಾನೆಂದೆ: 'ನನಗೆ ನಟನೆ ಬರುವುದಿಲ್ಲ'. ಅವರೆಂದರು: 'ಅಯ್ಯೋ ಮಾರಾಯಾ. ನನಗೂ ಬರುವುದಿಲ್ಲ. ಅಲ್ಲಿಗೆ ಹೋದ ಮೇಲೆ ಎಲ್ಲ ಬರುತ್ತೆ. ಬಂದುಬಿಡು.'

◆ **ದಕ್ಷಿಣ ಆಫ್ರಿಕಾದ ಗುಜರಾತಿ ವ್ಯಾಪಾರಿಗಳಲ್ಲಿ ಬೊಹ್ರಾ ಮುಸ್ಲಿಮರು ಇದ್ದರು. ಗಾಂಧಿ ಅವರಿಗಾಗಿ ವಕಾಲತ್ತು ಮಾಡಲು ಹೋಗಿದ್ದರು. ಗಾಂಧಿಯವರ ಬಗ್ಗೆ ಕೀನ್ಯಾದ ಭಾರತೀಯರಲ್ಲಿ ಯಾವ ಭಾವನೆಯಿದೆ?**

ಗಾಂಧಿಯವರ ಕೊಲೆಯಾದಾಗ ನಾನಿನ್ನೂ ಚಿಕ್ಕವನು. ಅವರ ಚಿತಾಭಸ್ಮವನ್ನು ಆಫ್ರಿಕೆಯ ಭಾರತೀಯ ಸಮುದಾಯಗಳಲ್ಲಿ ಹಂಚಲಾಯಿತು. ಭಸ್ಮ ಕರಂಡಕ ಕೀನ್ಯಾಕ್ಕೆ ಬಂದಾಗ, ಅದನ್ನು ಟ್ರೈನಿನಲ್ಲಿ ಮೊಂಬಾಸಾಕ್ಕೆ ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ವಿಸರ್ಜಿಸಿದರು. ಟ್ರೈನಿನ ತುಂಬಾ ಭಾರತೀಯರು ತುಂಬಿದ್ದರಂತೆ. ಆದರೂ ಗಾಂಧಿಯವರಿಗೆ ಕೀನ್ಯಾದ ಜತೆ ಹೆಚ್ಚಿನ ಸಂಪರ್ಕವಿಲ್ಲ. ಅವರದೇನಿದ್ದರೂ ದಕ್ಷಿಣ ಆಫ್ರಿಕಾ.

◆ **ನೆಲ್ಸನ್ ಮಂಡೇಲಾ ಅವರ ಪ್ರಭಾವ?**

ನಿಜವಾಗಿಯೂ ಅಷ್ಟಾಗಿಲ್ಲ. ಸ್ವಾತಂತ್ರ್ಯ ಬಂದ ಬಳಿಕ ಕೀನ್ಯನ್ ರಾಜಕಾರಣಿಗಳು ಬಹಳ ಭ್ರಷ್ಟರಾಗಿದ್ದಾರೆಂದು ಅವರಿಗೆ ಗೊತ್ತಿತ್ತು. ಟಾಂಜಾನಿಯಾದ ಅಧ್ಯಕ್ಷ ಜೂಲಿಯಸ್ ನೆರೇರೆ ಹೇಳುತ್ತಿದ್ದರು: 'ಕೀನ್ಯಾದಲ್ಲಿ ಮನುಷ್ಯರೇ ಮನುಷ್ಯರನ್ನು ತಿನ್ನುವ ಸಮಾಜವಿದೆ' ಎಂದು. ಜೆ.ಎಂ. ಕರಿಯೋಕಿ 'ಇಲ್ಲಿ ಹತ್ತು ಮಿಲಿಯನ್ ಭಿಕ್ಷುಕರೂ ಮತ್ತು ಹಂಡ್ರೆಡ್ ಮಲ್ಟಿಮಿಲಿನಿಯರ್ಸ್' ಎಂದು ಕೀನ್ಯಾದ ಆರ್ಥಿಕ ಅಸಮಾನತೆ ಬಗ್ಗೆ ವ್ಯಾಖ್ಯಾನಿಸುತ್ತಿದ್ದರು. ಬಹುತೇಕ ಕೀನ್ಯಾದ ಮಿಲಿನಿಯರುಗಳೆಲ್ಲ ಬಿಳಿಯರು.




ಲಂಡನ್‌ನ ಹೈಡ್ ಪಾರ್ಕಿನಲ್ಲಿ ಪ್ರತಿಭಟನೆ

◆ **ಭಾರತದಲ್ಲಿ ಎಲ್ಲೆಲ್ಲಿ ಫೋಟೊಗ್ರಫಿ ಮಾಡಿದ್ದೀರಿ?**

ರಾಜಸ್ಥಾನದ ಪುಷ್ಕರ್, ವಾರಾಣಸಿ, ಆಗ್ರಾ, ಈಚೆಗೆ ಹಂಪಿ.

◆ **ಹಂಪಿ ನಿಮ್ಮ ಗಮನ ಸೆಳೆಯಲು ಕಾರಣವೇನು?**

ಪುಣೆಯಲ್ಲಿ ನನ್ನ ಮಾಮಿಯ ತಮ್ಮ ಧರಂ ಕೊಹ್ಲಿ ಅಂತಿದ್ದ. ಅವನು ಭೇಟಿಯಾದಾಗೆಲ್ಲ 'ಅನಿಲ್, ನಿನ್ನನ್ನ ಹಂಪಿಗೆ ಕರೆದೊಯ್ಯಬೇಕು' ಎನ್ನುತ್ತಿದ್ದ. ಅವನೊಬ್ಬ ವಾಸ್ತುಶಿಲ್ಪಿ. ಅವನಿಗೆ ಹಂಪಿಯ ಮಹತ್ವ ಗೊತ್ತಿತ್ತು. ಅವನೊಮ್ಮೆ ನನ್ನನ್ನು ಇಲ್ಲಿಗೆ ಕರೆತಂದ. ನನಗೆ ಬಹಳ ಇಷ್ಟವಾಯಿತು. ಆಗಲಿಂದ ಬರುತ್ತಲೇ ಇದ್ದೇನೆ. ಹಂಪಿಯ ವಾತಾವರಣ ತಂಪಾಗಿದ್ದರೆ ವರ್ಷದಲ್ಲಿ ನಾಲ್ಕು ಸಲ ಬರುತ್ತಿದ್ದೆ.

◆ **ಈ ಸಲ ಎಲ್ಲೆಲ್ಲಿ ಹೋಗುವ ಯೋಜನೆಯಿದೆ?**

ಎಲ್ಲೂ ಇಲ್ಲ. ನಾಳೆ, ಅಶ್ವಲಾಯನ – ವಾಂಗೇಚಿಯರ ಮಗ ಕೃಷ್ಣನನ್ನು ಕಾಣಲು ಬೆಂಗಳೂರಿಗೆ ಹೋಗುತ್ತಿದ್ದೇನೆ. ಬಹಳ ದಿನವಾಯಿತು ಅವನನ್ನು ಕಾಣದೆ. ಭಾರತ ಮತ್ತು ಕೀನ್ಯಾ ಸಂಬಂಧಗಳ ಸಂಕೇತ ಅವನು. ●